

ಈಗ ವಿಹಾರವಾಗಿರುವ ತ್ಸಂಗ್‌ಯಾಂಗ್ ಗ್ಯಾತ್ಸೊ ಜನಿಸಿದ ಮನೆ

ತೆರೆದುಕೊಳ್ಳುವಂತೆ ಮಾಡುವುದು ಅವನ ಪ್ರಾಮಾಣಿಕತೆ. ಇಷ್ಟರಮೇಲೂ ಒಲ್ಲೆ ಎಂದ ಹೆಣ್ಣಿನ ಜತೆ ಅವನು ಒರಟಾಗಿ ನಡೆದುಕೊಳ್ಳಲಾರ. ಪಶುವಿನಂತೆ ಆಕ್ರಮಿಸಲಾರ. ಎಲ್ಲ ತವಕ, ತಲ್ಲಣಗಳ ಸಹಜ ವಿನಿಮಯದ ನಂತರವಷ್ಟೆ ಅವನು ಮುಂದುವರಿಯುವುದು. ಅಂತರಂಗದ ಈ ಪರಿಶುದ್ಧತೆ ಅವನಿಗೆ ವಿಶಿಷ್ಟ ದೈವಿಕಕಳೆಯನ್ನು ತಂದುಕೊಟ್ಟಿದೆ. ಅವನ ಕವಿಮನಸ್ಸಿಗೆ ಅಂತಃಕರಣದ ಅಮೃತ ಸಿಂಚನ ಮಾಡಿದೆ. ಹೀಗಾಗಿ ಅವನೊಡನೆ ಸುಖಿಸಿದ ಹೆಣ್ಣುಗಳಿಗೆ ಪಾಪಪ್ರಜ್ಞೆ ಕಾಡುತ್ತಿರಲಿಲ್ಲ. ಮತ್ತು ಅವನಿಗೂ ಕೂಡ.

ಪ್ರೇಮಿಸಲು ಮುಸ್ಸಂಜೆಯಲ್ಲಿ
ನಾನು ಕಾತರಿಸಿದೆ
ಮುಂಜಾನೆ ಹಿಮಪಾತವಾಗಿದೆ
ರಹಸ್ಯಗಳ ಬಗ್ಗೆ ಕಂಗೆಡಲೇಕೆ?
ಹೆಜ್ಜೆ ಗುರುತಿತ್ತು
ಹಿಮದ ಮೇಲೆ...

ಎಂದು ಬರೆಯಲು ಅವನು ಹಿಂಜರಿಯುವುದಿಲ್ಲ. ತನ್ನೊಡನೆ ರಾತ್ರಿ ಕಳೆದ ನಲ್ಲೆ ನಸುಕಿನಲ್ಲಿ ಹೊಸ ಹಿಮದ ಮೇಲೆ ನಡೆದುಹೋಗಿದ್ದಾಳೆ. ಗಮನಿಸುವವರಿಗೆ ಅವನ ಜತೆ ಜರುಗಿದ ಹಾದರಕ್ಕೆ ಅವಳ ಹೆಜ್ಜೆ ಗುರುತಿಗಿಂತ ಬೇರೆ ಪುರಾವೆ ಬೇಕೆ? ಯಾರು ಏನಾದರೂ ಅಂದುಕೊಳ್ಳಲಿ. ಅವನು ಸಂಭಾವಿತನಂತೆ ಸೋಗು ಹಾಕಲಾರ. ವಿರಕ್ತನಂತೆ ನಟಿಸಲಾರ. ಹೆಣ್ಣಿನ ಮೈವಾಸನೆಯಲ್ಲಿ ಅವನ ಮಹತ್ತರ ಅನ್ವೇಷಣೆಯಿದೆ. ಕವಿತೆಗೆ ಅಗತ್ಯವಿರುವ ತಳಮಳಗಳಿವೆ, ತುಮುಲವಿದೆ. ಕೆಲವೊಮ್ಮೆ ವಿಪ್ಲವಗಳಿವೆ.

ಪ್ರಿಯತಮೆ ಮತ್ತು ನಾನು
ಕದ್ದು ಕೂಡಿದೆವು